# ಅಡುಗೆ ಕಲೆ ಹೊಸ ಕಳೆ



ಅಡುಗೆಮನೆಯಲ್ಲಿ ಅಮ್ಮನಿಂದ ಮಗಳಿಗೆ ಕರಗತವಾಗುತ್ತಿದ್ದ ಅಡುಗೆಕಲೆ ಈಗ ಹೊಸರೂಪು ಪಡೆದುಕೊಂಡಿದೆ. ಅಮ್ಮನ ಜಾಗದಲ್ಲಿ 'ಯೂಟ್ಯೂಬ್' ನಿಂತಿದೆ. ಮಗಳ ಜಾಗದಲ್ಲಿ ಹೆಣ್ಣುಗಂಡಿನ ಭೇದವಿಲ್ಲದೆ ಎಲ್ಲರೂ ವಿದ್ಯಾರ್ಥಿಗಳಾಗಿದ್ದಾರೆ. ಪ್ರಾದೇಶಿಕ ಸೊಗಡಿನ ಆಹಾರ ಖಾದ್ಯಗಳು ಗಡಿರೇಖೆಗಳ ದಾಟಿ ಎಲ್ಲ ಅಡುಗೆಮನೆಗಳನ್ನೂ ಪ್ರವೇಶಿಸಿವೆ. ಕಾಂಟಿನೆಂಟಲ್ ಫುಡ್ ಎನ್ನುವುದು ಕರ್ನಾಟಕದ ಹಳ್ಳಿಯೊಂದರ ಅಡುಗೆಮನೆಯಲ್ಲಿ ಘಮಘಮಿಸುವಂತೆ, ಇಲ್ಲಿನ ಬಾಣಂತಿ ಸಾರು, ಕಷಾಯ, ಪತ್ರೊಡೆಗಳು ಬೇರಾವುದೋ ನೆಲದಲ್ಲಿ ಪರಿಮಳ ಚೆಲ್ಲುವ ಸಾಧ್ಯತೆಯಿದೆ. ಕೋವಿಡ್ ಕಾಲಘಟ್ಟದಲ್ಲಂತೂ ಯೂಟ್ಯೂಬ್ ವೇದಿಕೆಯಲ್ಲಿನ ಆಹಾರದ ವಿಡಿಯೊಗಳು ಭಾರೀ ಜನಪ್ರಿಯತೆ ಗಳಿಸಿವೆ. ಸ್ಪರ್ಧೆಯನ್ನು ಹೆಚ್ಚಿಸಿದ, ಆಹಾರಪ್ರೀತಿಯನ್ನೂ ಜಗದಗಲ ಹಂಚಿದ ಆಧುನಿಕ ಸಂಸ್ಕೃತಿಯ ಮುಖವಿದು. ಆಹಾರಪ್ರೀತಿಯನ್ನೇ ಉಸಿರಾಡುತ್ತಾ, ಬಾಳಬುತ್ತಿಗಾಗಿ ಏನೆಲ್ಲ ಮಾಡುವವರಿಗೆ ಡಿಜಿಟಲ್ ವೇದಿಕೆಯ ಆಕಾಶ ಕೈಗೆಟುಕಿದೆ. ಈ ಹೊಸ ಸಾಧ್ಯತೆಗಳ ಪಾಕಶಾಲೆಯಲ್ಲಿ, ತಿನಿಸುಗಳ ಸವಿಯ ಜತೆಗೆ ಸಂಸ್ಕೃತಿಯ ಬನಿಯನ್ನೂ ಹಂಚುತ್ತಿರುವವರ ಕಥನಗಳು ಆಸಕ್ತಿಕರ. ಅಂತಹ ಕೆಲವು ಸ್ವಾದದ ಅಗುಳುಗಳು 'ಸುಧಾ' ಓದುಗರ ರುಚಿಗೆಂದು ಇಲ್ಲಿವೆ.

■ ವಿಶಾಖ ಎನ್.